'ಸಿನಿಮಾ ಪೂರ್ತಿಯಾಗಿರಲಿಲ್ಲ. ಇನ್ನೊಂದು ದೃಶ್ಯ ಮಿಕ್ಕಿತ್ತು' ಎಂದ ಗಂಭೀರವಾದ ತನ್ನ ಪ್ರವಾದಿಸ್ವರದಲ್ಲಿ. ಐಸ್‌ಕ್ರಿಮ್ ತರುವಷ್ಟರಲ್ಲಿ ಆಕೆ ಸತ್ತು ಹೋಗಿರುತ್ತಾಳೆ. ಅವನು ಆಕೆಯ ಮುಂದೆ ಕುಳಿತು ದೊಡ್ಡದಾಗಿ ಅಳುತ್ತಾ, 'ಮನೋರಂಜನಿ, ಐಸ್‌ಕ್ರೀಮ್ ತಂದೆ. ಕಣ್ತೆರೆ. ನಾವು ಮತ್ತೇ ಹೊಸದಾಗಿ ಪ್ರೀತಿಯನ್ನು ಆರಂಭಿಸೋಣ. ನನಗೆ ಮತ್ತೊಂದು ಅವಕಾಶ ಕೊಡು' ಎಂದು ಅಳುತ್ತಾನೆ. ದುಃಖದಿಂದ ಕಿಟಿಕಿಗೆ ತಲೆಯನ್ನು ಚಚ್ಚಿಕೊಳ್ಳುತ್ತಾನೆ. ತಲೆ ಒಡೆದು, ಒಡೆದ ಕಿಟಿಕಿಯ ಗಾಜಿನ ತುಣುಕುಗಳು ಅವನ ಕಣ್ಣಲ್ಲಿ ಚುಚ್ಚಿಕೊಂಡವು. ಅವನ ಮುಂದಿರುವ ನದಿ ಅದೃಶ್ಯವಾಗುತ್ತದೆ. ಅವನ ಸಮಸ್ತ ಬಣ್ಣದ ಜಗತ್ತು ಅದೃಶ್ಯವಾಗುತ್ತದೆ' ಎಂದ ಕನ್ನಡಕವನ್ನು ತೆಗೆದು ಕಣ್ಣಂಚಿನ ನೀರನ್ನು ಒರೆಸಿಕೊಳ್ಳುತ್ತಾ.

ನಂತರ ಇಡೀ ದಿನ ಸತ್ಯಸುಂದರ್ ಆಕೆಗೆ ಕಾಣಿಸಲೇ ಇಲ್ಲ. ಅವನ ಕಾಟೇಜಿನ ಕಡೆಗೆ ಎರಡು ಮೂರು ಸಲ ಹೋಗಿಬಂದಳು. ಮುಚ್ಚಿದ್ದ ಬಾಗಿಲನ್ನು ನೋಡಿ ನಿರಾಸೆಯಿಂದ ಹಿಂತಿರುಗಿದಳು. ಸರೋವರದ ದಡದಲ್ಲಿ ಒಬ್ಬಳೇ ಕೂತು ಸರೋವರದ ನೀಲಿಬಣ್ಣದ ಹೊಳಪನ್ನು ನೋಡತೊಡಗಿದಳು. ಆ ಸಾಯಂಕಾಲದ ಸರೋವರ ಆಕೆಯನ್ನು ಪುಳಕಗೊಳಿಸಲಿಲ್ಲ. ಸರೋವರದ ಆಳದಲ್ಲಿ ಅವಿತಿರುವ ಕಪ್ಪು ರೂಪಗಳು ದಿಢೀರನೇ ಮೇಲೆದ್ದು ಬರುತ್ತವೆಯೆಂದು ಭಯಗೊಂಡಳು.

ಆ ಕಪ್ಪು ರೂಪಗಳು ಏನವು? ಆಕೆಯ ಒಂಟಿತನ, ಆಕೆಯ ಮನಸ್ಸು, ಆಕೆಯ ದೇಹ, ಹತ್ತಿ ಉರಿಯುತ್ತಿರುವ ಆಕೆಯ ದೇಹ.

ಕತ್ತಲಾಯಿತು. ಆಕೆ ಸರೋವರದ ದಡದಲ್ಲೇ ಕುಳಿತಿದ್ದಳು. ಸರೋವರದ ಮೇಲಿಂದ ತಣ್ಣನೆ ಗಾಳಿ ಬೀಸಿ ಆಕೆಯ ದೇಹಕ್ಕೆ ಕೊಂಚ ಉಪಶಮನವಾದಂತಾಯಿತು. ಗುಂಪಾಗಿ ಬಂದ ಕೆಲವು ಹುಡುಗರು ಸರೋವರದ ದಡದಲ್ಲಿ ಬೆಂಕಿ ಹಾಕಿದರು. ಕೇಕೆ, ತಮಾಷೆ ಹಾಡು. ಅವರ ಹಾಡುಗಳಿಗೆ ಸರೋವರ ಕೂಡಾ ಮಾದಕವಾಗಿ ತಲೆಯಾಡಿಸುತ್ತಿದ್ದಂತೆ ಭಾಸವಾಗತೊಡಗಿತು. ಆ ಹಾಡುಗಳ ಸದ್ದಿಗೆ ಸತ್ಯಸುಂದರ್ ಅಲ್ಲಿಗೆ ಬಂದ. ಸತ್ಯಸುಂದರನನ್ನು ನೋಡುತ್ತಲೇ ಅವಳಲ್ಲಿ ಚಲನೆ ಬಂತು. ಮನಸ್ಸಿನ ತುಂಬಾ ಎಂಥದೋ ಸಂತಸ. ಎದ್ದು ಸತ್ಯಸುಂದರ್ ಪಕ್ಕದಲ್ಲಿ ಕೂತಳು. ಆಕೆಯ ಇರುವಿಕೆಯನ್ನು ಗಮನಿಸಿದವನಂತೆ "ಬನ್ನಿ ಬನ್ನಿ" ಎಂದು ಮಾತನಾಡಿಸಿದ. ಸತ್ಯಸುಂದರ್ ದನಿ ಎತ್ತಿ ಒಂದು ಇಂಗ್ಲೀಷ್ ಹಾಡನ್ನು ಎತ್ತಿಕೊಂಡ.

'I Cry the whole night through; cry me a river, because I cried the river for you'

ಸರೋವರ ಅವನ ಹಾಡಿಗೆ ಪರವಶವಾದಂತೆ ಅದರ ಅಲೆಗಳು ಉದ್ವೇಗಗೊಂಡವು. ಡ್ರಮ್‌ಬೀಟ್ಸ್ ಮೊಳಗಿದಂತೆ, ಸಾವಿರ ಕೊಳಲುಗಳನ್ನು ಒಮ್ಮೆಲೇ ನುಡಿಸಿದಂತೆ ಅಲೆಗಳು ಭೋರ್ಗರೆದವು.

ಹಾಡುಗಳ ಸಡಗರ ಬೆಳಗಿನ ಜಾವದವರೆಗೆ ನಡೆಯಿತು. ಸತ್ಯಸುಂದರ್ 'ವಿತ್ ಯುವರ್ ಪರ್ಮಿಶನ್' ಎಂದು ಜೇಬಿನೊಳಗಿಂದ ಸ್ಕಾಚ್ ಬಾಟಲಿ ತೆಗೆದ. ನಂತರ ಹಾಡಿನಲ್ಲಿ ಉತ್ಸಾಹ ಉಕ್ಕಿತು. ಬೆಳಗಿನ ಜಾವ ದೊಡ್ಡ ಕೇಕೊಂದನ್ನು ಹೊರ ತೆಗೆದರು. ಸರೋವರದೊಳಗಿಂದ ಹುಟ್ಟಲಿರುವ ಹೊಸ ಬೆಳಗಿಗಾಗಿ ಒಮ್ಮೆಲೇ ಡ್ರಮ್ಸ್, ಗಿಟಾರ್‌ಗಳೊಂದಿಗೆ ಆ ಪ್ರದೇಶವನ್ನು ನಾದಮಯ ಮಾಡಿದರು. ಸರೋವರದ ಮುಖದ ಮೇಲೆ ತೆಳುವಾದ ಬೆಳಕು ಅರಳುವ ಸಮಯ. ಚಪ್ಪಾಳೆಗಳ ನಡುವೆ ಕೇಕನ್ನು ಕೊಯ್ದರು. ಅದ್ಭುತವಾದ ಕ್ಷಣಗಳಿವು. ಸತ್ಯಸುಂದರ್ ಮತ್ತೊಂದು ಹಾಡನ್ನು ಎತ್ತಿಕೊಂಡ.

"I believe I can fly
I believe I can search the sky"

ಆ ಮುಂಜಾನೆ ಆಕೆಯಲ್ಲಿ ಒಂದು ವಿಚಿತ್ರ ಪುಳಕ, ಒಂದು ಸಂಚಲನ ಉಂಟಾದವು. ಟ್ರಾನ್ಸ್‌ನೊಳಕ್ಕೆ ಹೋದವಳಂತೆ ಖುಷಿಯಿಂದ ಚೀರಿದಳು. ಕೇಕೆ ಹಾಕಿದಳು. ಪಕ್ಕದಲ್ಲಿದ್ದ ಸತ್ಯಸುಂದರ್‌ನನ್ನು ಅಪ್ಪಿಕೊಂಡು ಅವನ ಗಲ್ಲದ ಮೇಲೆ ಗಟ್ಟಿಯಾಗಿ ಮುತ್ತಿಟ್ಟಳು. ಅವನ ಬಲವಾದ ಕೈಗಳನ್ನು ತನ್ನೆದೆಗೆ ಒತ್ತಿಕೊಂಡಳು ವಾಕಿಂಗ್‌ಸ್ಟಿಕ್‌ಗಾಗಿ ತಡಕಾಡುತ್ತಿದ್ದ ಸತ್ಯಸುಂದರ್‌ನನ್ನು ತನ್ನ ಕೈಗಳಲ್ಲಿ ಹುದುಗಿಸಿಕೊಂಡು ರೂಮಿನವರೆಗೆ ಕರೆದೊಯ್ದಳು. ಸತ್ಯಸುಂದರ್‌ನ ಮುಖದಲ್ಲಿನ ಭಾವನೆಗಳನ್ನು ಓದಬೇಕೆಂದು ನೋಡಿದಳು. ಅವನ ಮುಖ ಎಂದಿನಂತೆ ಪ್ರವಾದಿಯಂತೆ ಗಂಭೀರವಾಗಿ, ಚಲನೆಯಿಲ್ಲದಂತಿತ್ತು.